ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:23.07.2019 ರಂದು ಅಪರಾಹ್ನ:3:00 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಬಗ್ಗೆ ಜರುಗಿದ ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು(ಶ್ರೀ/ಶ್ರೀಮತಿ):**

1. ಎಲ್.ಕೆ.ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.
3. ಎಂ.ಕೆ. ಕೆಂಪೇಗೌಡ, ಜಂಟಿ ನಿರ್ದೇಶಕರು, ಸಾಮಾಜಿಕ ಲೆಕ್ಕ ಪರಿಶೋಧನಾ ನಿರ್ದೇಶನಾಲಯ ಹಾಗೂ ಸಲಹೆಗಾರರು (ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
5. ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ.
6. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
8. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
9. ರೂಪಾ, Team lead, K-GIS, KSRSAC, ಬೆಂಗಳೂರು.
10. ಮಹೇಶ್, GIS expert, KSRSAC, ಬೆಂಗಳೂರು.
11. ಸಂದೀಪ್, ಪ್ರೋಗ್ರಾಮರ್, ಗ್ರಾಅಪ ಇಲಾಖೆ, ಬೆಂಗಳೂರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು(ಇ-ಆಡಳಿತ) ರವರು ಸ್ವಾಗತಿಸಿದರು.

ದಿನಾಂಕ:21.03.2019 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಿದ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಇ-ಆಡಳಿತ ಶಾಖೆಯಿಂದ ತಯಾರಿಸಲಾದ ಮಾರ್ಗಸೂಚಿಯನ್ನು ಮತ್ತು Process documentation ಪರಿಶೀಲಿಸಿ ಅನುಮೋದನೆ ಮಾಡಲು ಮತ್ತು ಕೂಡಲೇ ಸರ್ಕಾರಿ ಆದೇಶವನ್ನು ಹೊರಡಿಸಲು ನಿರ್ದೇಶಕರು, ಪಂ.ರಾಜ್-1 ರವರಿಗೆ ಸೂಚಿಸಲಾಯಿತು.

   (ಕ್ರಮ: ನಿರ್ದೇಶಕರು, ಪಂ.ರಾಜ್-1)

2. KSRSAC ರವರಿಂದ ಆಸ್ತಿಗಳ ಡಿಜಿಟಲೀಕರಣಗೊಳಿಸಲು Grid ವಾರು ನಕ್ಷೆಯನ್ನು ನೀಡುವಂತೆ ಪತ್ರವನ್ನು ಬರೆಯಲು ನಿರ್ದೇಶಕರು, ಇ-ಆಡಳಿತ ರವರಿಗೆ ತಿಳಿಸಲಾಯಿತು.

   (ಕ್ರಮ: ನಿರ್ದೇಶಕರು, ಇ-ಆಡಳಿತ)

3. ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳ 2019ನೇ (ಇತ್ತೀಚಿನ) ನಕ್ಷೆಗಳ image ಅನ್ನು ISRO ಯಿಂದ ಪಡೆದು Grid ವಾರು ನಕ್ಷೆಗಳನ್ನು ತಯಾರಿಸಿ ದಿನಾಂಕ:30.08.2019 ರೊಳಗೆ ಒದಗಿಸಲು KSRSAC ರವರಿಗೆ ತಿಳಿಸಲಾಯಿತು.

**(ಕ್ರಮ: ನಿರ್ದೇಶಕರು, KSRSAC)**

4. ನಕ್ಷೆಗಳ image ಅನ್ನು ISRO ಯಿಂದ ಪಡೆಯಲು ಮತ್ತು Grid ವಾರು ನಕ್ಷೆಗಳನ್ನು ತಯಾರಿಸಲು ಬೇಕಾದ ಅನುದಾನದ ಪ್ರಸ್ತಾವನೆಯನ್ನು KSRSAC ರವರು ನೀಡಿದ್ದು, ಪ್ರಸ್ತಾವನೆ ಹಣವನ್ನು ನಿಯಮಾನುಸಾರ ಬೆಂಗಳೂರು ನಗರ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಲು ಮತ್ತು ತದನಂತರ ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯವರು KSRSAC ರವರಿಗೆ ಎಲ್ಲಾ ಗ್ರಾಮ ಪಂಚಾಯತಿಗಳ Grid ವಾರು ನಕ್ಷೆಗಳ ಡಿಜಿಟಲೀಕರಣಕ್ಕೆ ಅನ್ವಯಿಸುವ ಹಣ ಬಿಡುಗಡೆ ಮಾಡುವುದು. **ದಿನಾಂಕ:30.08.2019 ರೊಳಗೆ** Grid ವಾರು ನಕ್ಷೆಗಳನ್ನು ಒದಗಿಸಲು KSRSAC ರವರಿಗೆ ತಿಳಿಸಲಾಯಿತು.

**(ಕ್ರಮ: ನಿರ್ದೇಶಕರು, KSRSAC)**

5. ಆಸ್ತಿಗಳ ಡಿಜಿಟಲೀಕರಣ ಮಾಡಲು ಬೇಕಾದ TAB ಗಳ Specifications ಈಗಾಗಲೇ TAP Committee ಯಲ್ಲಿ ಅನುಮೋದನೆಯಾಗಿರುವುದರಿಂದ, ಪ್ರತಿ TAB ಗೆ ಅಂದಾಜು ₹ 15,000/- ಗಳಂತೆ 250 TAB ಗಳನ್ನು ನಿಯಮಾನುಸಾರ KEONICS ಸಂಸ್ಥೆಯಿಂದ ಖರೀದಿಸಲು ಬೇಕಾದ ₹ 37.50 ಲಕ್ಷಗಳನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ ರವರಿಗೆ ಸೂಚಿಸಲಾಯಿತು.

**(ಕ್ರಮ: ನಿರ್ದೇಶಕರು, ಇ-ಆಡಳಿತ)**

6. ಆಸ್ತಿಗಳ ಡಿಜಿಟಲೀಕರಣಕ್ಕಾಗಿ ನೆರವಾಗಲು ಬೇಕಾಗುವ 250 ನೌಕರರನ್ನು KEONICS ಸಂಸ್ಥೆಯಿಂದ ಪಡೆಯಲು ಬೇಕಾದ ಅನುದಾನ ಅಂದಾಜು ₹ 1.5 ಕೋಟಿಯನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಇ-ಆಡಳಿತ ರವರಿಗೆ ಸೂಚಿಸಲಾಯಿತು.

**(ಕ್ರಮ: ನಿರ್ದೇಶಕರು, ಇ-ಆಡಳಿತ)**

7. ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಆಸ್ತಿಗಳ ಡಿಜಿಟಲೀಕರಣ ಮಾಡಲು ಗ್ರಾಮ ಪಂಚಾಯತಿ ಕಾರ್ಯದರ್ಶಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಬಿಲ್ ಕಲೆಕ್ಟರ್/ಕ್ಲರ್ಕ್/ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ನೇತೃತ್ವದಲ್ಲಿ 4 ತಂಡಗಳನ್ನು ರಚಿಸಿ, ಪ್ರತಿ ತಂಡಕ್ಕೆ KEONICS ಸಂಸ್ಥೆಯಿಂದ ಪಡೆದ ಇಬ್ಬರು ನೌಕರರನ್ನು ನೇಮಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

8. ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವಶ್ಯ ಸಿಬ್ಬಂದಿ ಹಾಗೂ TAB ಗಳನ್ನು ನಿಯಮಾನುಸಾರ KEONICS ಸಂಸ್ಥೆಯಿಂದ images ಅನ್ನು KSRSAC ಸಂಸ್ಥೆಯಿಂದ ಪಡೆದುಕೊಂಡು ಅವರುಗಳಿಗೆ ಸೂಕ್ತ ತರಬೇತಿ ವ್ಯವಸ್ಥೆ ಮಾಡಿ ಡಿಜಿಟಲೀಕರಣ ಯೋಜನೆಯನ್ನು ಯಶಸ್ವಿಗೊಳಿಸಲು ತಿಳಿಸಲಾಯಿತು.

**(ಕ್ರಮ: ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್)**

9. ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಎಲ್ಲಾ ಆಸ್ತಿಗಳ ಡಿಜಿಟಲೀಕರಣ ಮಾಡುವ ಮಾದರಿಯಲ್ಲಿ ತುಮಕೂರು ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ manual ಆಗಿ ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು pilot ಮಾದರಿಯಲ್ಲಿ manual ಆಗಿ ಸಮೀಕ್ಷೆಯನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ಈ ಸಮೀಕ್ಷೆಗೆ ಅವಶ್ಯವಿರುವ ನಮೂನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗ್ರಾಮ ಪಂಚಾಯತಿಗಳಿಗೆ ಒದಗಿಸಿ, manual survey ಅನ್ನು ಕೈಗೊಳ್ಳಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶಿಸುವುದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಆಯಾ ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲ ಹಾಗೂ 14ನೇ ಹಣಕಾಸು ಆಯೋಗದ ಅನುದಾನ ಆಡಳಿತ ವೆಚ್ಚದಲ್ಲಿ ಭರಿಸಲು ತಿಳಿಸಲು ಹಾಗೂ ಉಪಕಾರ್ಯದರ್ಶಿ, ತುಮಕೂರು ಜಿಲ್ಲಾ ಪಂಚಾಯತಿ ಇವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲು ತೀರ್ಮಾನಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ: ಗ್ರಾಅಪ/48/ಗ.ಕೋಶ/2019
ದಿನಾಂಕ: 30.07.2019

(ಎಲ್.ಕೆ. ಅತೀಕ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ನಿರ್ದೇಶಕರು, ಪಂ.ರಾಜ್-1, ಗ್ರಾಅಪ ಇಲಾಖೆ, ಬೆಂಗಳೂರು.
2. ಜಂಟಿ ನಿರ್ದೇಶಕರು, ಸಾಮಾಜಿಕ ಲೆಕ್ಕ ಪರಿಶೋಧನಾ ನಿರ್ದೇಶನಾಲಯ ಹಾಗೂ ಸಲಹೆಗಾರರು (ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
4. ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ.
5. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
7. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
8. ರೂಪಾ, Team lead, K-GIS, KSRSAC, ಬೆಂಗಳೂರು.
9. ಮಹೇಶ್, GIS expert, KSRSAC, ಬೆಂಗಳೂರು.
10. ಸಂದೀಪ್, ಪ್ರೋಗ್ರಾಮರ್, ಗ್ರಾಅಪ ಇಲಾಖೆ, ಬೆಂಗಳೂರು.

1/8/19 1/7/19

ಪ್ರತಿ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.

d:\d.k.-2019\proceedings\23.07.2019 dgitalization.docx